<u>ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಬೈಂದೂರು</u>

**ಸಿಸಿ ನಂಬ್ರ:1122/2023** **ಸಿಡಬ್ಲ್ಯೂ-6**

**ಪಿಡಬ್ಲ್ಯೂ- 4**

ಸಾಕ್ಷಿದಾರರ ಹೆಸರು : ಬಿ ಕೃಷ್ಣಯ್ಯ

ತಂದೆಯ ಹೆಸರು : ಗೋವಿಂದ ಶೇರುಗಾರ

ಪ್ರಾಯ : 66 ವರ್ಷ

ಉದ್ಯೋಗ : ನಿವೃತ್ತ ಅರಣ್ಯ ರಕ್ಷಕ

ವಾಸ : ಪಡುವರಿ, ಬೈಂದೂರು

ದಿನಾಂಕಃ 18-06-2025 ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನ ಭೋದಿಸಲಾಯಿತು

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ನಾನು 1990 ರಿಂದ 2019 ರವರೆಗೆ ಬೈಂದೂರು ಗಸ್ತಿನಲ್ಲಿ ವನ ರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 28-01-2004 ರಂದು ಕುಂದಾಪುರ ತಾಲೂಕು ಯಡ್ತರೆ ಗ್ರಾಮದ ಬೈಂದೂರಿನ ವಲಯ ಅರಣ್ಯ ಕಚೇರಿಯಲ್ಲಿ ದಾಖಲಾಗಿರುವ ಅರಣ್ಯ ತಕ್ಷೀರು ನಂಬ್ರ 64/2003-2004 ದ ಪ್ರಕರಣದಲ್ಲಿ ಕುಂದಾಪುರದ ಅರಣ್ಯ ಸಹಾಯಕ ಸಂರಕ್ಷಣಾಧಿಕಾರಿಯವರ ಸಮಕ್ಷಮದಲ್ಲಿ ಚಿರತೆಯ ಮೃತ ದೇಹವನ್ನು ದಫನ ಮಾಡುವ ಬಗ್ಗೆ ಸ್ಥಳದಲ್ಲಿ ಮಹಜರನ್ನು ಮಾಡಿರುತ್ತಾರೆ. ಸಹಾಯಕ ಅರಣ್ಯ ಸಂರಕ್ಷಾಣಾಧಿಕಾರಿ ಮತ್ತು ಪಶು ವೈಧ್ಯಾಧಿಕಾರಿಯವರನ್ನು ಕರೆಸಿ ಚಿರತೆಯ ಶವವನ್ನು ಪರೀಕ್ಷಿಸಿರುತ್ತಾರೆ. ವಲಯ ಅರಣ್ಯ ಅಧಿಕಾರಿಯವರ ಕಚೇರಿಯಲ್ಲಿ ಸಂಜೆ 05.30 ಗಂಟೆಯಿಂದ 06.00 ಗಂಟೆಯವರೆಗೆ ಚಿರತೆಯ ಶವವನ್ನು ಪಶು ವೈದ್ಯಾಧಿಕಾರಿಯವರು ವಲಯ

ಅರಣ್ಯಾಧಿಕಾರಿಯವರಿಗೆ ಬಿಟ್ಟುಕೊಟ್ಟಿರುತ್ತಾರೆ. ಚಿರತೆಯ ಶವವನ್ನು ಸುಟ್ಟು ಅದರ ಬೂದಿಯನ್ನು ಹೊಂಡದಲ್ಲಿ ಹಾಕಿರುತ್ತಾರೆ.

3. ನಿಪಿ 7 ರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ 7(ಬಿ) ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್.ಜೆ.ಎಸ್. ರವರಿಂದ</u>

ನಾನು ಪ್ರಥಮ ಬಾರಿಗೆ ಪ್ರಾಣಿಯ ಕಳೆಬರವನ್ನು ಕಚೇರಿಯಲ್ಲಿ ನೋಡಿರುತ್ತೇನೆ. ಪ್ರಾಣಿಯ ಕಳೆಬರವನ್ನು ಸರಕಾರಿ ವಾಹನದಲ್ಲಿ ತಂದಿರುತ್ತಾರೆ. ಸರಕಾರಿ ವಾಹನದಲ್ಲಿ ತಂದಿರುವುದು ಮಹಜರಿನಲ್ಲಿ ಕಂಡುಬರುವುದಿಲ್ಲ. ಚಿರತೆಯ ಕಳೆಬರ ಎಂದು ಚರ್ಮವನ್ನು ನೋಡಿ ಕಚೇರಿಯಲ್ಲಿ ಮೇಲಾಧಿಕಾರಿಗಳು ಹೇಳಿರುತ್ತಾರೆ. ನಾನು ನೋಡುವಾಗ ಕಳೆಬರಕ್ಕೆ ಚರ್ಮ ಇರಲಿಲ್ಲ. ಕಳೆಬರದ ಆಧಾರದಲ್ಲಿ ಪ್ರಾಣಿ ಯಾವುದು ಎಂದು ಹೇಳಲು ಬರುವುದಿಲ್ಲ ಹಾಗು ಚರ್ಮದ ಆಧಾರದಲ್ಲಿ ಪ್ರಾಣಿ ಯಾವುದು ಎಂದು ಹೇಳುವುದು ಎಂದರೆ ಸರಿ. ಕಚೇರಿಗೆ ತಂದಿರುವುದು ಚಿರತೆಯ ಕಳೆಬರ ಅಲ್ಲ ಎಂದರೆ ಸರಿಯಲ್ಲ. ಪಶು ವೈಧ್ಯಾಧಿಕಾರಿಯವರು ಏನೆಲ್ಲಾ ಪ್ರಕ್ರಿಯೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮೇಲಾಧಿಕಾರಿಗಳಲ್ಲಿ ಚಿರತೆಯ ಕಳೆಬರ ಎಂದು ಪಶು ವೈಧ್ಯಾಧಿಕಾರಿಯವರು ಹೇಳಿರುತ್ತಾರೆ. ಯಾವುದೇ ಸ್ವತಂತ್ರ ಸಾಕ್ಷಿದಾರರನ್ನು ಕರೆದುಕೊಂಡು ಬಂದು ಮಹಜರಿಗೆ ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ. ಕಳೆಬರವನ್ನು ದಫನ ಮಾಡಲು ಕಟ್ಟಿಗೆಯಲ್ಲಿ ಸುಟ್ಟಿರುತ್ತಾರೆ. ಮಹಜರಿನಲ್ಲಿ ಯಾವ ವಸ್ತುವಿನಿಂದ ದಫನ ಮಾಡಿದ್ದಾರೆ ಎಂದು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ದಫನ ಮಾಡಿರುವುದು ಚಿರತೆಯ ಕಳೆಬರ ಅಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಮೇಲಾಧಿಕಾರಿಗಳು ಫಿರ್ಯಾದುದಾರರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
ಬೈಂದೂರು